ಶ್ರೀ ಕಡಿದಾಳ್ ಮಂಜಪ್ಪ.—ನುವಾರು 19 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇದರಲ್ಲಿ ಹರಿಹರ–ಬೆಂಗಳೂರು ರಸ್ತೆಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆ ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ರಸ್ತೆಯಲ್ಲಿ ಬಹಳ ಟ್ರಾಫಿಕ್ ಇರುವುದರಿಂದ ಜಾಗ್ರತೆ ಮಾಡಿಸಲು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಣದಮೇಲೆ ಅವಲಂಬಿಸಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—1953-54ರಲ್ಲಿ ಈ ರಸ್ತೆಗೆ ಪ್ರಯಾರಿಟಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಕೋಲಾರ ಜಿಲ್ಲೆಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—1952–53ರಲ್ಲಿ ಖರ್ಚಾಗಿಲ್ಲ.

ಶ್ರೀ ಬಿ. ಎ. ನಾರಾಯಣರೆಡ್ಡಿ.—ಕೆಲಸ ಮಾಡಿಸಿದರಲ್ಲವೆ ಖರ್ಚಾಗುವುದು.

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮದಕಡೆ ಗಮನ ವೆಲ್ಲಾ ಹೋಯಿತು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅಲ್ಲಿ ಟ್ರಾಫಿಕ್ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಈ ವರ್ಷ 1 ಲಕ್ಷ 60 ಸಾವಿರ ರೂಪಾಯಿಗಳನ್ನು ಒದಗಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಹರಿಹರದಿಂದ ಶಿವಮೊಗ್ಗಕ್ಕೆ ಟ್ರಾಫಿಕ್, ಅದರಲ್ಲಿಯೂ ವ್ಯವಸಾಯಕ್ಕೆ ಸಂಬಂಧಪಟ್ಟದ್ದು ಜಾಸ್ತಿಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಗೋಪಾಲಗೌಡ —ಈ ರಸ್ತೆಯನ್ನು ಕಾರ್ಪೆಕ್ರೀಟ್ ಮಾಡಿಸುವ ಯೋಚನೆಯಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನಕ್ಕೆಬೈಲು ತುಂಗಾ ಅಣೆಕಟ್ಟಿಗೆ ಹೋಗುವ ರಸ್ತೆಗೆ ಮಾಡಿಸಬೇಕೆಂದು ಯೋಚನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ರಸ್ತೆಗಳು ತುಂಬ ಕೆಟ್ಟಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತೃಪ್ತಿಕರವಾದ ಸ್ಥಿತಿಯಲ್ಲಿಲ್ಲವೆಂದು ಆಗಲೇ ಒಪ್ಪಿಕೊಂಡಿದ್ದೇನೆ. ಹಣದ ಅಡಚಣೆಯಿಂದ ಎಲ್ಲ ಕಡೆಯೂ ತೆಗೆದುಕೊಳ್ಳುವುದ ಕ್ಕಾಗಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದರಿಂದ ರಸ್ತೆಗಳು ಹೆಚ್ಚು ಕೆಡುತ್ತವೆ. ಆದಕಾರಣ ಹೆಚ್ಚು ಗ್ರಾಂಟುಕೊಟ್ಟು ಹೆಚ್ಚು ದುರಸ್ತುಮಾಡಿಸಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಮೈಲಿಗೆ ಒಂದು ಸಾವಿರ ರೂಪಾಯಿಗಳನ್ನು maintenance grant ಕೊಡುತ್ತಿದ್ದೇವೆ.

ಶ್ರೀ ಜಿ. ಶಿವಪ್ಪ.—ಹರಿಹರದಿಂದ ಬೆಂಗಳೂರಿಗೆ ಬರುವ ರಸ್ತೆ 'ಇಂಟರ್ ನ್ಯಾಷನಲ್ ಹೈವೆ' ಅಲ್ಲವೆ ?

Sri KADIDAL MANJAPPA.—Sir, it is not international. It comes under 'National highways'. (Laughter).

Mr. SPEAKER.—Any other supplementary ?

ಶ್ರೀ ಜಿ. ಶಿವಪ್ಪ.—ಒಟ್ಟು ಎಷ್ಟು ಮೈಲಿ ತಾರು ಮತ್ತು ಸಿಮೆಂಟ್ ರಸ್ತೆ ಮಾಡಿದ್ದೀರಿ ?

Mr. SPEAKER.—Up to Tumkur.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮೈಲಿ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಶ್ರೀಮಾನ್ ಭೀಮಪ್ಪನಾಯಕರು ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—So the Member does not want that road. Only Sri Bheemappa Naik wants it (Laughter).

Restoration of Motagadahalli Tank, Hoskote Taluk.

Q.—555. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

whether they have ordered the restoration of the breached tank of Motagadahalli in Nandagudi Hobli of Hoskote Taluk ?

A.—Sri KADIDAL MANJAPPA (Minister for Revenue and Public Works).—

No.

ಶ್ರೀ ಎಚ್. ಟಿ. ಪುಟ್ಟಪ್ಪ.—ಇಲ್ಲಿ ಮೋತಗದಹಳ್ಳಿ ಕೆರೆ ಎಂದು ಮುದ್ರಣವಾಗಿದೆ. ಹೆಸರು ತಪ್ಪಾಗಿದೆ.

Mr. SPEAKER.—There is some printing mistake.

ಶ್ರೀ ಎಚ್. ಟಿ. ಪುಟ್ಟಪ್ಪ.—ಅರ್ಜಿ ಬಂದಿದೆಯೆ ಇದನ್ನು ರಿಪೇರಿ ಮಾಡಬೇಕೆಂದು ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ದಿವಸವೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಪ್ರಾಜೆಕ್ಟ್ 40 ಸಾವಿರ ರೂಪಾಯಿಗಳಿಗೆ ತಯಾರಾಗಿದೆ, ಇಷ್ಟು ಖರ್ಚಾಗುತ್ತದೆ ರಿಪೇರಿಮಾಡುವುದಕ್ಕೆ. ಇದು ಬಹಳ ಸಣ್ಣ ಕೆರೆ. ಬಹಳ ಕಡಮೆ ಜಮೀನಿಗೆ, ನುವಾರು 25 ಎಕರೆಗೆ, ಪ್ರಯೋಜನ ಪಡೆಯುವುದಕ್ಕೆ ಇಷ್ಟು ಖರ್ಚುಮಾಡುವುದು ಸಾಧುವೆ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ನಿಂಪ್ರದಾಯವಾಗಿರುವುದರಿಂದ ನಾವು ಪ್ರಶ್ನೆಗಳನ್ನು ಕಳುಹಿನುತ್ತೇವೆ, ತಾವು ಅವಕ್ಕೆ ಉತ್ತರಕೊಡುತ್ತೀರಿ, ಅದರಂತೆ ನಡೆಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Mr. SPEAKER.—It depends upon the answer.

Restoration of Hinjanahalli Tank, Hoskote Taluk.

Q.—556. Sri H. T. PUTTAPPA (Hoskote-Anekal—Scheduled Castes).—

Will the Government be pleased to state:—

(*a*) whether the tank of Hinjanahalli in Hoskote Taluk is breached;

(*b*) whether they intend restoring the tank;

(*c*) if so, when?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) No.

(*c*) Does not arise in view of (*b*).

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಕೆರೆ ಕಿತ್ತುಹೋಗಿರುವುದರಿಂದ ಅನೇಕ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕೆರೆಯ ಅಂಗಳವನ್ನು ಬಹಳ ದಿವಸದ ಹಿಂದೆ ಸಾಗುವಳಿ ಕೊಟ್ಟಿದ್ದಾರೆ; ರೈತರು ಸಾಗುವಳಿ ಮಾಡುತ್ತಿದ್ದಾರೆ. ಈಗ ಕೆರೆ ರಿಪೇರಿ ಮಾಡಬೇಕಾದರೆ ರೈತರಿಂದ ಜಮೀನನ್ನು ಅಕ್ವೈರ್ ಮಾಡಬೇಕಾದ ಪ್ರಶ್ನೆ ಬರುತ್ತದೆ. ಆದುದರಿಂದ ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದು ನಮ್ಮ ಅಧಿಕಾರಿಗಳ ಅಭಿಪ್ರಾಯ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕೆರೆಗೆ ಅಚ್ಚು ಗಟ್ಟೆಪ್ಪಿದೆ?

ಶ್ರೀ ಕಡಿದಾಳ್ ಮಂಜಪ್ಪ.—25 ಎಕರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕೆರೆಯನ್ನು ರಿಪೇರಿಮಾಡಿಸಲು ಅಂದಾಜು ತಯಾರು ಮಾಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕೆರೆ ಅಂಗಳವನ್ನು ಸಾಗುವಳಿಗೆ ಕೊಟ್ಟಾಗ ಅದನ್ನು ಸರ್ಕಾರದವರು ಕೇಳಿದಾಗ ಬಿಟ್ಟುಕೊಡಬೇಕೆಂಬ ಷರತ್ತಿರುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಸಂದರ್ಭಗಳಲ್ಲಿಯೂ ಈ ಪರತ್ತು ಇರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಈ ಷರತ್ತು ಹಾಕಿಕೊಡುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ರೈತರು ಈ ಕೆರೆಯನ್ನು ಜೀರ್ಣೋದ್ಧಾರಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದಕ್ಕೆ ಸರ್ಕಾರದವರು ಏನು ಉತ್ತರವನ್ನು ಕೊಟ್ಟಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಿದ್ದೇನೆ. ಕೆರೆ ಅಂಗಳದಲ್ಲಿ 2½ ಎಕರೆಯನ್ನು ಸಾಗುವಳಿಗೆ ಕೊಟ್ಟಿದ್ದಾರೆ. ರೈತರು ತುಂಬ ಹಣ ಖರ್ಚುಮಾಡಿ ಸಾಗುವಳಿ ಮಾಡಿದ್ದಾರೆ, ಅದನ್ನು ಅಕ್ವೈರ್ ಮಾಡುವುದು ಕಷ್ಟವೆಂದು ಹೇಳಿದೆ.

QUESTIONS FOR ANSWERS FOR THE DAY.

But not taken up.

Industrial Loans.

Q.—6. Sri S. KARIAPPA (Virupakshapura).—

Will the Government be pleased to state:—

(*a*) the recipients of industrial loans in the State (figures may be given for the past five years);

(*b*) the instalments due in each case in respect of return of the loans?

A.—Sri H. SIDDAVEERAPPA (Minister for Home and Industries).—

(*a*) and (*b*) Statement appended below:—